ಶ್ರೀ ಬಸವರಾಜ ಹೆಚ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಚಿಂತಾಮಣಿ ತಾಲ್ಲೂಕು ನಂದಿಗಾನಹಳ್ಳಿಯಲ್ಲಿ ಒಂದು 66:11 ಕೆ.ವಿ. 18 ಎಂ.ವಿ.ಎ. ಸಾಮರ್ಥ್ಯದ ಉಪ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಪ್ರಸ್ತಾವನೆಗೆ ನಿಗಮದ ತಾಂತ್ರಿಕ ಸಮಿತಿಯು ಮಾರ್ಚ್ 1999 ರಲ್ಲಿ ಅನುಮೋದನೆಯನ್ನು ನೀಡಿರುತ್ತದೆ.

ಆ) ಈ ಉಪ ಕೇಂದ್ರದ ನಿರ್ಮಾಣಕ್ಕೆ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಇ) ಅನುಮೋದಿತ ವಿವರವಾದ ಪ್ರಯೋಜನಾ ವರದಿ ಬಂದ ನಂತರ ಕಾಮಗಾರಿ ಕೆಲಸವನ್ನು ನಿರ್ವಹಿಸಲು ಗುತ್ತಿಗೆದಾರರನ್ನು ನೇಮಿಸಿ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

ಚಿಂತಾಮಣಿ ನಗರಕ್ಕೆ ವರ್ತುಲಾಕರದ ರಸ್ತೆ ಕಾಮಗಾರಿ

15(19) - ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆದೇಶ ಸಂ:ನಆಇ 312 ಎಂಐಬಿ 2000 ಬೆಂಗಳೂರು ದಿ: 22-7-2000 ರಂದು ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 13 (3) ಅನ್ವಯ ಚಿಂತಾಮಣಿ ನಗರಕ್ಕೆ ವರ್ತುಲಾಕಾರದ ರಸ್ತೆಗಳನ್ನು ಮಂಜೂರು ಮಾಡಿರುವುದು ನಿಜವೇ?

ಆ) ಈ ರೀತಿ ಮಂಜೂರಾಗಿರುವ ವರ್ತುಲಾಕಾರದ ರಸ್ತೆಗೆ ಬೇಕಾಗಿರುವ ನಕ್ಷೆಯಲ್ಲಿ ನಮೂದಿಸಿರತಕ್ಕಂತಹ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ?

ಇ) ಈ ವರ್ತುಲಾಕಾರದ ರಸ್ತೆ ತೀ ಮುಖ್ಯವಾಗಿ ಬೇಕಾಗಿರುವುದರಿಂದ ಸದರಿ ರಸ್ತೆಯನ್ನು ಪೂರೈಸಿಕೊಡಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ರಾಜ್ಯ ಸಚಿವರು)

ಅ) ಸರ್ಕಾರದ ಆದೇಶ ಸಂಖ್ಯೆ:ನಆಇ 312 ಎಂಐಬಿ 2000, ದಿ:22-7-2000 ರಲ್ಲಿ ಚಿಂತಾಮಣಿ ನಗರಕ್ಕೆ ಸ್ಥೂಲಾಭಿವೃದ್ಧಿ (ಜೆ.ಡಿ.ಪಿ.)ಯೋಜನೆಯನ್ನು ಅನುಮೋದಿಸಲಾಗಿದೆ. ಅದರಲ್ಲಿ 30 ಮೀಟರ್ ಅಗಲದ ವರ್ತುಲ ರಸ್ತೆಯು ಸೇರಿರುತ್ತದೆ.

ಆ) ಇನ್ನೂ ಕ್ರಮ ಕೈಗೊಂಡಿರುವುದಿಲ್ಲ.

ಇ) ಈ ಬಗ್ಗೆ ಚಿಂತಾಮಣಿ ಸ್ಥಳೀಯ ನಗರ ಯೋಜನಾ ಪ್ರಾಧಿಕಾರದಿಂದ ಪ್ರಸ್ತಾವನೆ ಬಂದಾಗ ಸೂಕ್ತವಾಗಿ ಪರಿಸೀಲಿಸಲಾಗುವುದು.